# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1031 (1022) |
| ಸದಸ್ಯರ ಹೆಸರು | : | ಶ್ರೀ ವೈ. ಎಂ. ಸತೀಶ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ದಿನಾಂಕ | : | 16.12.2025 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಮಹಾನಗರ ಪಾಲಿಕೆಯ ಕಡತಗಳನ್ನು ಗಣಕೀಕೃತ ಇತರೆ ಮಹಾನಗರ ಪಾಲಿಕೆಯಂತೆ ಇಂದೀಕರಿಸಲಾಗಿದೆಯೇ (Digitization of Records); ಇಲ್ಲವಾದಲ್ಲಿ ಗಣಿಕೀಕೃತ ಮಾಡಲು ಈ ಬಗ್ಗೆ ಸರ್ಕಾರದಿಂದ ಯಾವ ಕ್ರಮ ಜರುಗಿಸಲಾಗಿದೆ; | ರಾಜ್ಯದ ಮಹಾನಗರ ಪಾಲಿಕೆಗಳಂತೆ ಬಳ್ಳಾರಿ ಮಹಾನಗರಪಾಲಿಕೆಯ ಕಡತಗಳನ್ನು ಗಣಕೀಕೃತ ಇಂದೀಕರಿಸಲು ದಿನಾಂಕ:09.10.2025ರಂದು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| ಆ) | ಗಣಕೀಕೃತ ಇಲ್ಲದಿರುವುದರಿಂದ ಪಾಲಿಕೆಯಲ್ಲಿನ ಕಡತಗಳು ಕಳೆದು ಹೋಗಿರುವುದರಿಂದ ಸಾರ್ವಜನಿಕರು ತೊಂದರೆಪಟ್ಟು ಅಲೆದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಇದಕ್ಕೆ ಸಂಬಂಧಿಸಿದ ಅಧಿಕಾರಿಗಳ ಹೊಣೆಗಾರಿಕೆ/ಜವಾಬ್ದಾರಿಗಳೇನು; ಅವರುಗಳ ಮೇಲೆ ತೆಗೆದುಕೊಂಡ ಕ್ರಮಗಳೇನು; ಮಾಹಿತಿ ಒದಗಿಸುವುದು; | ಬಳ್ಳಾರಿ ಮಹಾನಗರಪಾಲಿಕೆಯ ಅಭಿಲೇಖಾಲಯ ಶಾಖೆಯಲ್ಲಿರುವ ಯಾವುದೇ ರೀತಿಯ ಕಡತಗಳು ಕಳೆದು ಹೋಗಿರುವ ಪ್ರಕರಣಗಳು ಕಂಡುಬಂದಿರುವುದಿಲ್ಲ. ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ 2015ರವರೆಗಿನ ಕಡತಗಳನ್ನು ಅಭಿಲೇಖಾಲಯ ಶಾಖೆಯಿಂದ ನಿರ್ವಹಿಸಲಾಗುತ್ತಿದೆ. ಮುಂದುವರೆದು ಬಳ್ಳಾರಿ ಮಹಾನಗರಪಾಲಿಕೆಯ ಮೂರು ವಲಯ ಕಛೇರಿಗಳಲ್ಲಿರುವ ಕಡತಗಳನ್ನು ಆಯಾ ವಲಯ ಕಛೇರಿಯ ಉಸ್ತುವಾರಿಯಲ್ಲಿ ಇಟ್ಟುಕೊಂಡಿರುತ್ತಾರೆ. ಸದರಿ ಕಡತಗಳನ್ನು ಪಾಲಿಕೆಯ ಕೇಂದ್ರ ಕಛೇರಿಯ ಅಭಿಲೇಖಾಲಯ ಶಾಖೆಗೆ ಹಸ್ತಾಂತರಿಸಿರುವುದಿಲ್ಲ.<br><br>ಸದರಿ ಶಾಖೆಯ ಮುಖ್ಯಸ್ಥರಾಗಿ ಉಪ ಆಯುಕ್ತರು (ಆಡಳಿತ) ಇವರು ಕಾರ್ಯನಿರ್ವಹಿಸುತ್ತಿರುತ್ತಾರೆ ಹಾಗೂ ಈ ಶಾಖೆಯಲ್ಲಿ ಆಡಳಿತಾಧಿಕಾರಿಗಳು (ಆಡಳಿತ), ಕಛೇರಿ ವ್ಯವಸ್ಥಾಪಕರು ಹಾಗೂ ವಿಷಯ ನಿರ್ವಾಹಕರು ಕಾರ್ಯನಿರ್ವಹಿಸುತ್ತಿರುತ್ತಾರೆ. ಮುಂದುವರೆದು ಕಡತಗಳನ್ನು ಎ.ಬಿ.ಸಿ.ಡಿ ಮತ್ತು ಇ ಎಂದು ವರ್ಗವಾರು ವರ್ಗೀಕರಣ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ. |
| ಇ) | ಇತ್ತೀಚಿಗೆ ಇ-ಖಾತೆ ಸ್ವತ್ತು ಪೂರ್ಣಗೊಂಡಿರುವ ಕಡತಗಳು ಸಹ ಸೂಕ್ತ ರೀತಿಯಲ್ಲಿ ವಿಲೇ ಮಾಡದೆ ಇರುವುದು ಮತ್ತು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಮೂರು ವಲಯ ಕಛೇರಿಗಳನ್ನು ವಿಂಗಡಿಸಲಾಗಿದ್ದು ಸದರಿ ವಲಯ ಕಛೇರಿಗಳ ವ್ಯಾಪ್ತಿಯಲ್ಲಿನ ಇ-ಖಾತೆ ಕಡತಗಳು ಆಯಾ ವಲಯ ಕಛೇರಿಗಳ ಉಸ್ತುವಾರಿಯಲ್ಲಿ ಇಟ್ಟುಕೊಂಡಿರುತ್ತಾರೆ. ಇ-ಖಾತೆ ಸ್ವತ್ತು ಪೂರ್ಣಗೊಂಡಿರುವ ಕಡತಗಳನ್ನು ಕಾಲಕಾಲಕ್ಕೆ ಕಾಲೋಚಿತಗೊಳಿಸಲಾಗುತ್ತಿದೆ. |

| | | |
|---|---|---|
| ಈ) | ಬಳ್ಳಾರಿ ಮಹಾನಗರ ಪಾಲಿಕೆಯನ್ನು ಯಾವ ಕಾಲಮಿತಿಯಲ್ಲಿ ಗಣಕೀಕೃತಗೊಳಿಸಲಾಗುವುದು ವಿವರಗಳೊಂದಿಗೆ ಮಾಹಿತಿ ಒದಗಿಸುವುದು? | ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ಕಡತಗಳನ್ನು ಇಂದೀಕರಿಸಲು ದಿನಾಂಕ:09.10.2025 ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ ಟೆಂಡರ್ ಕಾರ್ಯಾದೇಶ ನೀಡಿದ ಅಂದಾಜು 6 ತಿಂಗಳುಗಳ ಕಾಲಮಿತಿಯಲ್ಲಿ ಗಣಕೀಕೃತಗೊಳಿಸಲು ಕ್ರಮವಹಿಸಲಾಗುವುದು. |

**ಸಂಖ್ಯೆ: ನಅಇ 55 ಎಬಿಸಿ 2025 (ಇ)**

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು